ರಾಜ್ಯದಲ್ಲಿ ನಡೆದ ಪೋಲೀಸ್ ಗೋಲಿಬಾರ್‌ನಲ್ಲಿ ಮೃತ ಪಟ್ಟವರು

೨೫. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧ನೇ ಮಾರ್ಚ್ ೧೯೮೮ ರಿಂದ ೩೦ನೇ ಆಗಸ್ಟ್ ೧೯೮೮ ವರೆಗೆ ನಡೆದ ಪೋಲೀಸ್ ಗೋಲಿಬಾರ್‌ಗಳಲ್ಲಿ ಮೃತ ಪಟ್ಟವರ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಪ್ರಕರಣಗಳಲ್ಲಿ ಮೃತಪಟ್ಟವರಿಗೆ ಪರಿಹಾರ ರೂಪದಲ್ಲಿ ನೀಡಿರುವ ಹಣವೆಷ್ಟು (ವಿವರ ಒದಗಿಸುವುದು) ?

ಇ) ಗೋಲಿಬಾರಿಗೆ ಸಂಬಂಧಿಸಿದ ಎಷ್ಟು ಜನ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೫.

ಆ) ರೂ. ೪೭,೫೦೦ ವಿವರ ಈ ಕೆಳಕಂಡಂತಿದೆ.

೧) ಕ್ಯಾಲನೂರಿನಲ್ಲಿ ನಡೆದ ಗೋಲಿಬಾರ್ (ಒಬ್ಬರು ಮೃತಪಟ್ಟಿದ್ದಾರೆ). — ರೂ. ೨೦,೦೦೦

೨) ಚಿಂಚೋಳಿ ಪಟ್ಟಣ (ಒಬ್ಬರು ಮೃತಪಟ್ಟಿದ್ದಾರೆ) — ರೂ. ೨,೫೦೦ (ಮಾ.ಮಂ.ಯವರ ಪರಿಹಾರ ನಿಧಿಯಿಂದ)

೩) ವಂಧುವನಹಳ್ಳಿ (ಒಬ್ಬರು ಮೃತಪಟ್ಟಿದ್ದಾರೆ) — ರೂ. ೨೦,೦೦೦

೪) ಹಂದನಕೆರೆ (ಒಬ್ಬರು ಮೃತಪಟ್ಟಿದ್ದಾರೆ) — ರೂ. ೫,೦೦೦ (ರಾಜ್ಯಪಾಲರ ಪರಿಹಾರ ನಿಧಿಯಿಂದ)

೫) ರಾಮಸ್ವಾಮಿ ಪಾಳ್ಯ ಬಾಣಸವಾಡಿ ಬೆಂ. ಸಿಟಿ (ಒಬ್ಬ ರೌಡಿ ಮೃತ ಪಟ್ಟಿದ್ದಾರೆ) — ಪರಿಹಾರ ಕೊಟ್ಟಿಲ್ಲ.

ಇ) ಇಲ್ಲ.

ಮಂಗಳಬಾಗಿಲು ಟೌನ್‌ನಲ್ಲಿ ಕುಡಿಯಲಿಂವ ನೀರು ಸರಬರಾಜು ಮಾಡುವುದು

೨೮. ಶ್ರೀ ಎಂ.ವಿ. ವೆಂಕಟಪ್ಪ (ಮಂಗಳಬಾಗಿಲು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮಂಗಳಬಾಗಿಲು ಟೌನಿನಲ್ಲಿ ಜನತೆಗೆ ಕುಡಿಯುವ ನೀರಿನ ಸರಬರಾಜು ಮಾಡುತ್ತಿರುವ ಒಟ್ಟು ಪ್ರಮಾಣವೆಷ್ಟು ?

೨) ಹಾಗಿದ್ದಲ್ಲಿ ಈಗ ಸರಬರಾಜು ಮಾಡುತ್ತಿರುವ ನೀರು ಸಾಕಾಗದೆ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಹಾಗಿದ್ದಲ್ಲಿ ಬೇಸಿಗೆ ಕಾಲವಾದ್ದರಿಂದ ಕುಡಿಯುವ ನೀರನ್ನು ಹಾಗೆ ಸರಬರಾಜು ಮಾಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಟಿ. ಎನ್. ನರಸಿಂಹ ಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು),—

೧) ದಿನಂಪ್ರತಿ ೨.೧೮ ಮಿಲಿಯನ್ ಲೀಟರ್ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

೨) ಬಂದಿದೆ.

೩) ೧೫ ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆದು ಹಾಗೂ ಈಗ ಇರುವ ಒಳ್ಳೆಯ ೪ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಲು ೬ ಲಕ್ಷ ರೂ. ಅಂದಾಜು ತಯಾರಿಸಲಾಗಿದೆ. ಇದನ್ನು ಮಂಜೂರು ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಬರಗಾಲಕ್ಕೆ ಒಳಗಾದ ತಾಲ್ಲೂಕುಗಳು

೩೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈ ವರ್ಷ ಬರಗಾಲಕ್ಕೆ ಒಳಗಾದ ತಾಲ್ಲೂಕುಗಳೆಷ್ಟು ? ಹಾಗೂ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ಈ ರೀತಿ ಬರಗಾಲಕ್ಕೆ ತುತ್ತಾದ ಗ್ರಾಮಗಳಿಗೆ ಬರಗಾಲ ಪರಿಹಾರ ಕಾರ್ಯಕ್ರಮಕ್ಕೆ ಸರ್ಕಾರವು ಖರ್ಚು ಮಾಡಿದ ಹಣ ಎಷ್ಟು ?

ಇ) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಕೇಳಿದ ಹಣವೆಷ್ಟು ಮತ್ತು ಕೇಂದ್ರದವರು ನೀಡಿದ ಹಣ ಎಷ್ಟು ?

ಶ್ರೀ ಅಜೀಜ್ ಸೇಠ್ (ಕಂದಾಯ ಮಂತ್ರಿಗಳು).—

ಅ) ೪೧ ತಾಲ್ಲೂಕುಗಳು
೨೪೧೨ ಗ್ರಾಮಗಳು

ಆ) ೩೫ ಲಕ್ಷ ರೂಪಾಯಿಗಳು

ಇ) ಇಲ್ಲ.

ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು

೩೧ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿ ಪುರ).— ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂದನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಸದ ೨ ವರ್ಷದಿಂದ ವಿದ್ಯುಚ್ಛಕ್ತಿ ಪೂರೈಕೆ ಆಗದೆ ಇರುವ ರೈತರ ಪಂಪು ಸೆಟ್ಟುಗಳ ಸಂಖ್ಯೆ ಎಷ್ಟು?

ಆ) ಈ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಆಗದಿರಲು ಕಾರಣಗಳೇನು ಮತ್ತು ಇವುಗಳಿಗೆ ಈಗಲಾದರೂ ವಿದ್ಯುಚ್ಛಕ್ತಿ ಪೂರೈಸಲು ಸರ್ಕಾರದವರು ಕ್ರಮಗಳೇನಾದರೂ ಕೈಗೊಳ್ಳುವರೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು)—

ಅ) ವಿವರಗಳನ್ನು ಎಲ್ಲಾ ಜಿಲ್ಲೆಗಳಿಂದ ಸಂಗ್ರಹಿಸಲಾಗುತ್ತಿದ್ದು ಅವುಗಳನ್ನು ಇಷ್ಟರಲ್ಲೇ ಮಂಡಿಸಲಾಗುವುದು.

ಆ) ಈ ವರ್ಷ ಅಂದರೆ ೧೯೮೯–೯೦ರಲ್ಲಿ ೪೦,೦೦೦ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ ಮಾಡಲು ಗುರಿ ಹಾಕಿಕೊಳ್ಳಲಾಗಿದೆ. ೧೯೯೦ ಫೆಬ್ರುವರಿ ಅಂತ್ಯದವರೆಗೆ ೩೪೬೫೬ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗಿದೆ. ಆದಾಗ್ಯೂ ಡಿಸೆಂಬರ್ ೧೯೮೯ರ ವೇಳೆಗೆ ೬೯೧೪೬ ನೀರಾವರಿ ಪಂಪು ಸೆಟ್ಟುಗಳ ಅರ್ಜಿಗಳು ಬಾಕಿ ಉಳಿದಿದ್ದವು. ಅರ್ಜಿದಾರರು ಅವರ ಪಂಪುಸೆಟ್ಟುಗಳಿಗೆ ವಿದ್ಯುತ್ ಪಡೆಯಲು ರೋಷ್ಟರ್ ನಿಯಮದಂತೆ ತಮ್ಮ ಸರದಿಗಾಗಿ ಕಾಯಬೇಕಾಗುತ್ತದೆ. ಪ್ರತಿ ವರ್ಷ ಸುಮಾರು ೬೦,೦೦೦ದಿಂದ ೭೦,೦೦೦ ಪಂಪುಸೆಟ್‌ಗಳ ಅರ್ಜಿಗಳು ನೊಂದಾಯಿಸಲ್ಪಡುತ್ತವೆ. ಪ್ರತಿ ವರ್ಷವೂ ಗುರಿ ಮೀರಿದ ಸಂಖ್ಯೆಯಲ್ಲಿ ಪ್ರಗತಿ ಸಾಧಿಸುತ್ತಿದ್ದರೂ ಕೂಡ ಬಾಕಿ ಉಳಿಯುತ್ತಿವೆ. ಮಂಡಳಿಯ ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಿಂದ ಬಾಕಿ ಉಳಿಯುವ ಅರ್ಜಿಗಳಿಗೆ ಆಯಾ ವರ್ಷವೇ ವಿದ್ಯುತ್ ಒದಗಿಸುವುದು ಸಾಧ್ಯವಾಗಲಾರದು.